**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ**

**<u>ಸಿ ಸಿ ಸಂಖ್ಯೆ: 716/2021</u>**

**<u>ಆಪಾದನೆ</u>**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ. ನರಸೀಪುರ ಆದ ನಾನು

1. ಮುತ್ತು ಕೆ ಉಃ ಮುತ್ತು ರಾಜ್
   ಬಿನ್ ಲೇ ಕೃಷ್ಣ ನಾಯಕ,
   48 ವರ್ಷ, ವಾಸಃ ಕೌದಳ್ಳಿ ಗ್ರಾಮ,
   ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

2. ಶಾಂತಕುಮಾರ್ ಬಿನ್ ದಾಸೇಗೌಡ
   48 ವರ್ಷ, ವಾಸಃ ಒಡೆಯರ ಹೊಸಹಳ್ಳಿ,
   ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು.

3. ಶ್ರೀಮತಿ ರಾಜಮ್ಮ ಕೋಂ ಬಸವಣ್ಣ
   40 ವರ್ಷ, ವಾಸಃ ಕಲ್ಕಳ್ಳಿ ಗ್ರಾಮ, ನಂಜನಗೂಡು
   ತಾಲ್ಲೂಕು, ಮೈಸೂರು ಜಿಲ್ಲೆ.

ಎಂಬ ಆರೋಪಿತನಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ಆಪಾದನೆ ಏನೆಂದರೆ–

ದಿನಾಂಕ 20.08.2019 ರಂದು ರಾತ್ರಿ 9.15 ಗಂಟೆ ಸಮಯದಲ್ಲಿ ತಿ.ನರಸೀಪುರ ಪೊಲೀಸ್ ಠಾಣೆ ವ್ಯಾಪ್ತಿಯ, ತಿ. ನರಸೀಪುರ ತಾಲ್ಲೂಕಿನ ಯಡದೊರೆ – ಇಂಡುವಾಳು ಮಧ್ಯೆ ತಿ. ನರಸೀಪುರ – ಮೈಸೂರು ಮುಖ್ಯ ರಸ್ತೆಯಲ್ಲಿ, ಆ ರಸ್ತೆಯ ಮಾರ್ಗದಲ್ಲಿ ಚಲಿಸಲು ಅನುಮತಿ ಇಲ್ಲದಿದ್ದರೂ

ಕೂಡ 1 ನೇ ಆರೋಪಿತರಾದ ನೀವು ಖಾಸಗಿ ಬಸ್ ಸಂಖ್ಯೆ ಕೆಎ-15-4669 ನ್ನು ತಿ. ನರಸೀಪುರ ಕಡೆಯಿಂದ ಮೈಸೂರು ಕಡೆಗೆ ಅತೀ ವೇಗ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿ ರಸ್ತೆ ಮಧ್ಯ ಭಾಗ ಕೆಟ್ಟು ನಿಂತಿದ್ದ ಲಾರಿ ಸಂಖ್ಯೆ ಕೆಎ-11-ಬಿ-6633 ರ ಹಿಂಭಾಗಕ್ಕೆ ಢಿಕ್ಕಿ ಪಡಿಸಿ ಅಪಘಾತ ಮಾಡಿ, ಆ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ಹೆಚ್ ಎನ್ ಪ್ರಜ್ವಲ್, ಎಸ್ ವಿನಯ್, ಮಹದೇವಪ್ರಸಾದ್ ಮತ್ತು ರಾಜೇಶ್ ಎಂಬುವವರಿಗೆ ತೀವ್ರತರವಾದ ಗಾಯಪಡಿಸಿ ಅವರ ಮರಣವನ್ನುಂಟು ಮಾಡಿ, ಆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ-2/ಬಸವರಾಜು, ಚಾಸಾ-3/ರಾಜಪ್ಪ, ಚಾಸಾ-4/ಸುನೀಲ್, ಚಾಸಾ-5/ಲೊಕೇಶ್, ಚಾಸಾ-6/ನಾಗಮಣಿ, ಚಾಸಾ-7/ಪಿ ಕಿರಣ್, ಚಾಸಾ-8/ಮಂಜು, ಚಾಸಾ-9/ದಾಸನೂರು ಬಸವಣ್ಣ, ಚಾಸಾ-10/ಚಂದ್ರಮ್ಮ, ಚಾಸಾ-11/ಕೆಂಡಮ್ಮ, ಚಾಸಾ-12/ಲೋಕಮಣಿ, ಚಾಸಾ-13/ಶ್ವೇತ, ಚಾಸಾ-14/ಕುಃ ಚೈತ್ರಾ, ಚಾಸಾ-15/ಗೌರಮ್ಮ, ಚಾಸಾ-16/ಚೆನ್ನಮ್ಮ, ಚಾಸಾ-17/ಸಾಕಮ್ಮ, ಚಾಸಾ-18/ಚಿಕ್ಕಳ್ಳಿ ನಾಗಮ್ಮ, ಚಾಸಾ-19/ನವೀನ್ ಮತ್ತು ಚಾಸಾ-20/ಮಹೇಶ್ ರವರಿಗೆ ಸಾಮಾನ್ಯ ಹಾಗೂ ತೀವ್ರ ಸ್ವರೂಪದ ಗಾಯಪಡಿಸುವ ಮೂಲಕ ಹಾಗೂ ಗಾಯಾಳುಗಳಿಗೆ ಚಿಕಿತ್ಸೆ ಕೊಡಿಸದೆ ಮತ್ತು ಅಪಘಾತವಾದ ಬಗ್ಗೆ ಪೊಲೀಸ್ ಠಾಣೆಗೆ ಮಾಹಿತಿ ನೀಡದೆ ಹೋಗುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 279, 337, 338 ಮತ್ತು 304-ಎ ಹಾಗೂ ಮೋಟಾರು ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯಾದ ನೀವು ಸದರಿ ಲಾರಿಯನ್ನು ರಸ್ತೆಯ ಪಕ್ಕಕ್ಕೆ ಸೂಚನಾ ಫಲಕ ಮತ್ತು ಸಿಗ್ನಲ್ ಲೈಟ್ ಹಾಕಿ ನಿಲ್ಲಿಸದೆ, ಅದನ್ನು ರಸ್ತೆ ಮಧ್ಯಭಾಗಕ್ಕೆ ನಿಲ್ಲಿಸಿ, ಈ ಮೇಲೆ ಹೇಳಿದ ಅಪಘಾತಕ್ಕೆ ಮತ್ತು ಅದರ ಪರಿಣಾಮಕ್ಕೆ ಕಾರಣವಾಗುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.283, 337, 338, 304-ಎ

ಹಾಗೂ ಮೋಟಾರು ವಾಹನ ಕಾಯ್ದೆ ಕಲಂ 177 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, ಈ ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, 3 ನೇ ಆರೋಪಿಯಾದ ನೀವು ಸದರಿ ಬಸ್‌ನ ಮಾಲೀಕರಾಗಿದ್ದು, ಅಪಘಾತವಾದ ರಸ್ತೆಯ ಮಾರ್ಗದಲ್ಲಿ ಅದನ್ನು ಚಲಿಸಲು ಅನುಮತಿ ಇಲ್ಲದೇ ಇದ್ದರೂ ಕೂಡ ಅದನ್ನು 1 ನೇ ಆರೋಪಿತ ಚಲಾಯಿಸಲು ಅವಕಾಶ ಮಾಡಿಕೊಡುವ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ 192–ಎ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು.

ಪ್ರಶ್ನೆಃ ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ದ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**ದಿನಾಂಕಃ 29.12.2023.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ತಿ.ನರಸೀಪುರ**